ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 4, September-October 2022, Pp. 70- 73
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# 'ದಣಿ ಪುರಾಣ: ಒಂದು ಗ್ರಾಮೀಣ ಪ್ರಗಾಥ'ದಲ್ಲಿ ಊಳಿಗಮಾನ್ಯ ಪದ್ಧತಿಯ ನಿರ್ಮೂಲನೆ ಆಶಯಗಳು

**ಡಾ. ಮಹಮದರಫಿ ಆರ್. ದೊಡಮನಿ***

*ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸವದತ್ತಿ, ತಾ: ಸವದತ್ತಿ ಜಿ: ಬೆಳಗಾವಿ

***Abstract:***

*'ಕನ್ನಡ ಪ್ರಗಾಥಗಳ ಸಾಮ್ರಾಟ್' ಎಂಬ ಖ್ಯಾತಿಯನ್ನು ಪಡೆದಿರುವ ಕನ್ನಡದ ಹೆಸರಾಂತ ಕವಿ, ಸಾಹಿತಿ, ಚಲನಚಿತ್ರ ಸಾಹಿತಿ, ಪ್ರಾಧ್ಯಾಪಕರೂ ಆದ ಡಾ. ದೊಡ್ಡರಂಗೇಗೌಡರು ಕನ್ನಡ ಪ್ರಮುಖ ವಿದ್ವಾಂಸರಲ್ಲಿ ಒಬ್ಬರು. ಕನ್ನಡ ಸಾಹಿತ್ಯದಲ್ಲಿ 'ಮನುಜ' ಎಂಬ ಕಾವ್ಯನಾಮದಿಂದ ಡಾ. ದೊಡ್ಡರಂಗೇಗೌಡರು ಚಿರಪರಿಚಿತರು. ಇವರು ಕನ್ನಡ ಸಾಹಿತ್ಯದ ಕಾವ್ಯ, ಮುಕ್ತಕಗಳು, ಪ್ರವಾಸಕಥನ, ಚಿತ್ರಸಾಹಿತ್ಯ, ಪ್ರಗಾಥಗಳಂತಹ ವಿವಿಧ ಪ್ರಕಾರಗಳಲ್ಲಿ ಎಂಭತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರು ತುಮಕೂರು ಜಿಲ್ಲೆಯ ಮಧುಗಿರಿ ತಾಲೂಕಿನ ಕುರುಬರಹಳ್ಳಿಯವರು. ಡಾ. ರಂಗೇಗೌಡರು ಸಾಹಿತ್ಯಿಕ ಕೃಷಿಗೆ ಎಂಭತ್ತಾರನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಗಿರಿ ಒಲಿದುಬಂದಿದೆ. ಇವರ ಸಾಹಿತ್ಯದಲ್ಲಿ ಪ್ರೀತಿ-ಪ್ರೇಮ, ದಾಂಪತ್ಯ, ಪ್ರಕೃತಿ, ಸಾಮಾಜಿಕ ಮೇಲು-ಕೀಳು, ತಾರತಮ್ಯಗಳನ್ನು ತೆಗೆದುಹಾಕುವಲ್ಲಿ ಯಶಸ್ವಿಗೊಂಡಿವೆ. ಅದರಲ್ಲಿ ಈ ಲೋಕದ ತಾರತಮ್ಯ ಭಾವಗಳು, ಮೇಲು ಕೀಳು ಎಂಬ ಭೇದಗಳು ನಡೆದ್ದಿದು ಇದ್ದೆ ಇದೆ. ನದಿ ತೀರಗಳಲ್ಲಿ ನಾಗರಿಕತೆಗಳು ಅಳಿದ ಹಾಗೆ ಅಸಮಾನತೆಗಳು ಉದ್ಭವಿಸಿವೆ. ಮುಂದೆ ಪ್ರಜ್ಞಾವಂತರು ಹೆಚ್ಚಾದ ಹಾಗೆ ಇಂತಹ ಪಟ್ಟಭದ್ರ ಹಿತಾಸಕ್ತಿಗಳನ್ನು ವಿರೋಧಿಸುವ ತನ್ಮೂಲಕ ಸಮಾನತೆಯನ್ನು ಪ್ರಚುರಪಡಿಸುವ ಕಾರ್ಯವನ್ನು ವಿದ್ಯಾವಂತ ಯುವ ಜನಾಂಗ ಮಾಡುತ್ತಾಬಂದಿದೆ. ಇದನ್ನೇ ಡಾ. ದೊಡ್ಡ ರಂಗೇಗೌಡರ 'ದಣಿ ಪುರಾಣ: ಒಂದು ಗ್ರಾಮೀಣ ಪ್ರಗಾಥ' ಎಂಬ ನೀಲ್ಗತೆಯಲ್ಲಿ ಇಂತಹ ವಸ್ತುವನ್ನು ಕವಿ ಕೈಗೆತ್ತಿಕೊಂಡು ಇಡೀ ಫ್ಯೂಡಲ್ (ಊಳಿಗಮಾನ್ಯ ಪದ್ಧತಿ) ಪದ್ಧತಿಗೆ ನಾಂದಿ ಹಾಡುವ ವಸ್ತುವನ್ನು ಈ ಪ್ರಗಾಥದಲ್ಲಿ ತೆಗೆದುಕೊಂಡಿರುವುದನ್ನು ಕಾಣುತ್ತೇವೆ.*

***Keywords:*** *ಕನ್ನಡ ಸಾಹಿತ್ಯ, ಪ್ರಗಾಥ, ಊಳಿಗಮಾನ್ಯ ಪದ್ಧತಿ, ದಣಿ ಪುರಾಣ.*

## ಪೀಠಿಕೆ

"ಊಳಿಗಮಾನ ಪದ್ಧತಿ ಅನ್ನುವುದು ಶ್ರೀಮಂತರ (ಒಡೆಯ ಅಥವಾ ಧಣಿ) ಮತ್ತು ಹಿಡುವಳಿದಾರರ (ರೈತ) ನಡುವಿನ ಆಳ್ವಿಕೆ ಮತ್ತು ಮಿಲಿಟರಿ ಪದ್ಧತಿ"[1] ಈ ರೀತಿಯ ಪದ್ಧತಿಯು 9ನೇ ಶತಮಾನದಿಂದ 15ನೇ ಶತಮಾನದವರೆಗೆ ಪ್ರವರ್ಧಮಾನದಲ್ಲಿತ್ತು. ಈ ಪದ್ಧತಿಯಲ್ಲಿ ಒಡೆಯ, ಹಿಡುವಳಿದಾರ ಮತ್ತು ಉಂಬಳಿ ಎಂಬ ಮೂರು ಪರಿಕಲ್ಪನೆಯಲ್ಲಿ ಸಾಗುತ್ತದೆ. ಇದು "ಲ್ಯಾಟಿನ್ ಪದ ಫ್ಯುಡಮ್ (ಫೀಜ್) ನಿಂದ ಪಡೆಯಲಾಗಿದ್ದರೂ, ನಂತರ ಉಪಯೋಗದಲ್ಲಿದ್ದ ಶಬ್ದ ಫ್ಯುಡಲಿಸಂ ಮತ್ತು ಮಧ್ಯಯುಗದ ಅವಧಿಯಲ್ಲಿ ಜೀವಿಸುತ್ತಿದ್ದ ಜನರಿಂದ ಇದನ್ನು ಔಪಚಾರಿಕ ರಾಜಕೀಯ ಪದ್ಧತಿ ಎಂದು

[1] ಊಳಿಗಮಾನ ಪದ್ಧತಿ (2022) ಮಾಹಿತಿಯನ್ನು ದಿನಾಂಕ 8/8/2022 ರಂದು https://kn.wikipedia.org/s/heg ಅಂತರ್ಜಾಲ ಕೊಂಡಿಯಿಂದ ಪಡೆಯಲಾಗಿದೆ.

***Please cite this article as:*** ಮಹಮದರಫಿ ಆರ್. ದೊಡಮನಿ. (2022). 'ದಣಿ ಪುರಾಣ: ಒಂದು ಗ್ರಾಮೀಣ ಪ್ರಗಾಥ'ದಲ್ಲಿ ಊಳಿಗಮಾನ್ಯ ಪದ್ಧತಿಯ ನಿರ್ಮೂಲನೆ ಆಶಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(4), 70–73.

ಭಾವಿಸಲಾಗಿಲ್ಲ."[2] ಆದರೆ ಇಲ್ಲಿ ಉಳಿಗಮಾನ್ಯ ಎಂದಾಗ ಸಾಮಾನ್ಯವಾಗಿ ಒಬ್ಬ ಮನುಷ್ಯ ಇನ್ನೊಬ್ಬನಿಗೆ ಅಧೀನನಾಗಿರುವಂತಹ ವೈಯಕ್ತಿಕ ಸಂಬಂಧಗಳಿರುವವರಿಂದ ಭೂಸ್ವಾಮ್ಯ ಹಕ್ಕುಗಳನ್ನು ಪಡೆದು ವ್ಯವಸ್ಥಿತವಾಗಿ ಪಾಲನೆ, ಪೋಷಣೆ ಮಾಡುವ ನ್ಯಾಯಯುತವಾದ ವ್ಯವಸ್ಥೆ. ಆದರೆ ಈ ವ್ಯವಸ್ಥೆಯಲ್ಲಿ ಅನ್ಯಾಯ ತಾಂಡವಾಡುತ್ತಿರುವಾಗ ಅದನ್ನು ತೊಡೆದುಹಾಕಲು ಪ್ರಯತ್ನಿಸುವ ಯುವ ಜನಾಂಗದ ಯಾವ ರೀತಿ ಪ್ರತಿರೋಧ ನೀಡುತ್ತದೆ ಎಂಬ ಕಥಾಹಂದರವನ್ನು ಡಾ. ದೊಡ್ಡರಂಗೇಗೌಡರ 'ದಣಿ ಪುರಾಣ: ಒಂದು ಗ್ರಾಮೀಣ ಪ್ರಗಾಥ'ದಲ್ಲಿ ಅಭಿವ್ಯಕ್ತಗೊಂಡಿದೆ.

*"ಮಂದಿ ದಣಿ ಕೊಯ್ದು ದಣಿ ಬಂದ ಸದ್ದಾಯಿತು*
*ಮಾರು ಮಾರಿಗೆ ನಿಂತು, 'ಬುದ್ಧಿ', ಎಂದಡ್ಡ ಬಿದ್ದ*
*ನಡ ಬಗ್ಗಿದ ಹಿಡಿದ ಬೀಡಿ ಆರಿಸಿ ಕೈ ಬೆನ್ನ ಹಿಂದೆ ತಳಿದ*
*ಇದ್ದ ಒಂದೇ ಚಡ್ಡಿ ತೊಟ್ಟ*
*ಕಸರು ಗದ್ದೆ ತುಳಿದ ಮಣ್ಣ ಕೂಡ ಒರೆಸಿಕೊಳ್ಳದ*
*ಹೈದರಲ್ಲರ ತಲೆಗಳು ಕೆಳಗಿಲಿದವು ಬಾಗಿ;"*[3]

ಈ ಪ್ರಗಾಥದ ಆರಂಭದಲ್ಲಿ ಹಿಂದುಳಿದ ಪ್ರದೇಶವೊಂದರಲ್ಲಿ ಊರಿನ ಗೌಡನೊಬ್ಬ ನಡೆದುಕೊಳ್ಳುವ ದರ್ಪದ ಬಗೆಯನ್ನು ಕಾಣುತ್ತೇವೆ. ತನ್ನ ಆಸ್ತಿಯ ಬಲದಿಂದ, ಅಂತಃಸ್ತಿನ ಪ್ರಾಬಲ್ಯದಿಂದ ಸಂಪಾದನೆಯ ದೃಷ್ಟಿಯಿಂದ ಇಡೀ ಸುತ್ತಲಿನ ಹತ್ತು ಹಳ್ಳಿಗಳಿಗೆ ಬಹುದೊಡ್ಡ ನಾಯಕನಾಗಿ ಉಳ್ಳವರನ್ನೇ ಪ್ರತಿನಿಧಿಸುತ್ತಾನೆ. ತಾನು ಹೇಳಿದ್ದೆ ನಡೆಯಬೇಕು ಎನ್ನುವುದರ ಸಲುವಾಗಿ ಅಮಾಯಕರನ್ನು ಅನ್ಯಾಯದ ಸುಳಿಯಲ್ಲಿ ಸಿಲುಕಿಸಿ, ದಬ್ಬಾಳಿಕೆಯನ್ನು ನಡೆಸುತ್ತಾನೆ. ಇಂತಹ ದುಷ್ಟ ಪಾಳೆಗಾರನ ಡೌಲು–ದರ್ಪಕ್ಕೆ ಬಲಿಯಾಗಿ, ಭಯದಿಂದ ಬಾಳುವ ಜನರ ಗೋಳಿನ ಚಿತ್ರಣವನ್ನು ದೇಸಿ ಭಾಷೆಯಲ್ಲಿ ಅತ್ಯದ್ಭುತವಾಗಿ ಹೆಣೆದಿದ್ದಾರೆ. ಗೌಡನ ಕ್ರೌರ್ಯಕ್ಕೆ ಹಣಿಮಣಿದು ದುಡಿದರೂ ಮತ್ತೂ ಅವರನ್ನು ಗೋಳುಹೋಯಿದುಕೊಳ್ಳುವ ಬಗೆಯು ಪ್ರಗಾಥದ ಮುಂದಿನ ಭಾಗದಲ್ಲಿ ಕಾಣುತ್ತದೆ.

*ಎಲ್ಲಾ ಕೆಲಸ ಆಯ್ತೇರೋ? ಕಸ ಬಳಿದಿರೇನ್ರೋ?*
*ಸೌದೆ ಒಡೆದಿರೇರೋ?*
*ಎತ್ತುಗಳ ಮೈ ತೊಳೆದಿರೇನ್ರೋ*
*ಚೀಲ ಬಂಕ ಹಾಕಿ ನೀರ್ಮ ಮಾಡಿದ್ದಾಯ್ತು;*
*ಅಲ್ಲವ್ರೋ ಮರೆತುಗಿರಿತು ಮಲಗಿದ್ರೋ*
*ಇಲ್ಲಾ–ಕಳ್ಳುಗಿಳ್ಳು ಕುಡಕೊಂಡು ಬಂದ್ದಿದ್ರೋ?*[4]

ಮುಂದುವರೆದು ಗೌಡ ತನ್ನ ನಯಗಾರಿಕೆಯಿಂದ ಜೀತದಾಳುಗಳನ್ನು ಮೋಸದ ಗಾಳದಲ್ಲಿ ಬೀಳಿಸಿಕೊಳ್ಳುವ ಚಿತ್ರಣವನ್ನು ಈ ಪ್ರಗಾಥದ ಮುಂದಿನ ಸಾಲುಗಳಲ್ಲಿ ಎದ್ದು ಕಾಣುತ್ತದೆ. ಇದು "ಸಾಮಾನ್ಯ ಅರ್ಥದಲ್ಲಿ ಒಬ್ಬ ಮನುಷ್ಯ ಇನ್ನೊಬ್ಬನಿಗೆ ಅಧೀನವಾಗಿರುವಂಥಹ ವೈಯಕ್ತಿಕ ಸಂಬಂಧಗಳಿರುವ ಮತ್ತು ಭೂಸ್ವಾಮ್ಯ ಹಕ್ಕುಗಳನ್ನು ಅನುಕ್ರಮವಾಗಿ ಪಡೆದಿರುವ ವ್ಯವಸ್ಥೆ ಪಾಲನೆ ಪೋಷಣೆ ಮಾಡುವ ಒಂದು ಪಕ್ಷಕ್ಕೂ ಸೇವೆ ವಿಧೇಯತೆ ತೋರುವ ಇನ್ನೊಂದು ಪಕ್ಷಕ್ಕೂ ನಡುವಣ ವೈಯಕ್ತಿಕ ಸಂಬಂಧಸೂಚಕವಾದ ಮಧ್ಯಯುಗೀನ ನ್ಯಾಯವ್ಯವಸ್ಥೆವೆಂಬುದು ಈ ಪದದ

[2] ಅದೇ.,
[3] ಕನ್ನಡವೇ ನನ್ನ ಧರ್ಮ ಪು.ಸಂ.59
[4] ಅದೇ., ಪು.ಸಂ.59

(ಪ್ಯೂಡಲಿಸಂ) ವಿಶಿಷ್ಟಾರ್ಥ."[5] ಇದಕ್ಕೆ ಅನುಗುಣವಾಗಿ ಈ ಕೆಳಗಿನ ಪ್ರಗಾಥದ ಸಾಲು ಬೆಳಕು ಚೆಲ್ಲುತ್ತದೆ.

***"ಈ ಮಲೆತು ನಿಂತ ಕೊಬ್ಬು ಕಡಿಯುವವರಿಲ್ಲ.***
***ಆ ವರ್ಗಕ್ಕೆ ಕಾಯಕಲ್ಪ ಕಂಡು ಹಿಡಿಯುವವರಿಲ್ಲ ಎಂದೇನಲ್ಲ;***
***ಎಲ್ಲರೂ ಒಂದಲ್ಲ ಒಂದು ತೆವಲಿಗೆ ಆ ವ್ಯಕ್ತಿ ಮುಲಾಜಿಗೆ***
***ಒಳಗಾಗಿ ಹೀಗೆ ದಾಕ್ಷಿಣ್ಯ ಮೂರ್ತಿ ಉತ್ಸವದೊಳಗೆ***
***ಮೂರು ಹೊತ್ತೂ ಮುಳಗಿ ಹಣದ ಕಣಜ***
***ತುಂಬುತ್ತಾ ಹೋಗಿದ್ದಾನೆ ಈ ಜಾಣರಾಜ."[6]***

ಊಳಿಗಮಾನ್ಯ ಪದ್ಧತಿಯು ಕೊನೆಗಾಣದೆ ಇರುವುದಕ್ಕೆ ಕಾರಣವನ್ನು ಸಹ ಕವಿ ಹೇಳುತ್ತಾನೆ. ಈ ವ್ಯವಸ್ಥೆಯಡಿಯಲ್ಲಿರುವ ವ್ಯಕ್ತಿಗಳು ತಮ್ಮ ಯಾವುದೋ ಮುಲಾಜಿಗೆ ಇಲ್ಲವೇ ದಣಿಯಿಂದ ಪಡೆದ ಸಹಾಯಕ್ಕಾಗಿ ದಣಿಗಳನ್ನು ಉತ್ಸವಮೂರ್ತಿಗಳನ್ನಾಗಿ ಮಾಡಿ ಅವರ ಶ್ರೀಮಂತಿಕೆಯನ್ನು ಹೆಚ್ಚಿಸಲು ಅನ್ಯಾಯಕ್ಕೊಳಗಾದ ಜನರೇ ಕಾರಣವಾಗಿದ್ದಾರೆಂದು ಕವಿ ಹೇಳುತ್ತಾನೆ. ಮುಂದುವರೆದು ಕವಿ ದಣಿಯ ಅನ್ಯಾಯ, ಅಕ್ರಮ ಸಂಬಂಧಕ್ಕೆ ಬಲಿಯಾದ ಹೆಣ್ಣುಗಳ ಗೋಳನ್ನು ಈ ರೀತಿ ಹೇಳುತ್ತಾನೆ.

***"ಬಂಜೆಯರ ಫಲವತ್ತು ಮಾಡ ಹೊರಟವನು***
***ಮೈಮುಖ ಪರಚಿ ಗಾಯ ಮಾಡಿದವರನ್ನೂ***
***ಕಾಡಿ ಕೂಡಿದವನು, ಬಯಲಸೀಮೆ ಸರಹದ್ದಿಗೇ***
***ಗಿಡುಗನಾಗಿ ನಿಂತವನು"[7]***

ಇಂತಹ ವ್ಯವಸ್ಥೆಯನ್ನು ಆಧುನಿಕ ಕಾಲದ ಯುವ ಸಮೂಹ ಜ್ಞಾನವಂತರಾಗಿ ಸಿಡಿದ್ದೆದ್ದು ಹಾಡುಹಗಲೇ ಉಳಿಗಮಾನ್ಯ ವ್ಯವಸ್ಥೆಯನ್ನು ಪುಡಿಗಟ್ಟುತ್ತಾರೆಂದು ಕವಿ ಹೇಳುತ್ತಾನೆ. ಆದರೂ ವಿಫಲ ಕಾನೂನಿನ ಮುಂದೆ ಈ ವ್ಯವಸ್ಥೆ ಏಲೆಮರೆ ಕಾಯಿಯಂತೆ ಮುಂದುವರೆದರೂ ಇದನ್ನು ಆಧುನಿಕ ಯುವ ಸಮೂಹ ತಮಗೆ ಜ್ಞಾನೋದಯವಾದ ದಿನ ಈ ಪದ್ಧತಿಯು ಈ ಜಗತ್ತಿನಿಂದ ನಿರ್ಮೂಲನೆಯಾಗುವ ಆಶಯವನ್ನು ಈ ಕೆಳಗಿನ ಪದ್ಯವು ವ್ಯಕ್ತಪಡಿಸುತ್ತದೆ.

***"ಊರಿಗೆ ವಿದ್ಯುತ್ ಬಂದ ದಿನ***
***ಚಾವಡಿ ರೇಡಿಯೋ ಕಂಡ ದಿನ***
***ಸಿಡಿದೆದ್ದರು***
***ಇಪ್ಪತ್ತನೆಯ ಶತಮಾನದ ಘಟಿಂಗ ಹುಡುಗರು!***
***ಹಾಡು ಹಗಲೇ***
***ಯುವಗಣ***
***ಪಟ್ಟಭದ್ರನನ್ನ***
***ಭರ್ಜರಿ ತದುಕಿ ಉಸಿರ ತೆಗೆದರು!"[8]***

[5]ಪೂರ್ವೋಕ್ತ.–1
[6]ಪೂರ್ವೋಕ್ತ–3, ಪು.ಸಂ.62
[7]ಕನ್ನಡವೇ ನನ್ನ ಧರ್ಮ ಪು.ಸಂ.63
[8]ಅದೇ. ಪು.ಸಂ.64

ಈ ದಣಿ ಪುರಾಣ ಪ್ರಗಾಥದಲ್ಲಿ ಈ ಪ್ಯೂಡಲ್ ಪದ್ಧತಿಗೆ ಡೈನಾಮೈಟ್ ಇಡುವ ಸಂದರ್ಭವೇ ಸಚಿತ್ತಣವಾಗಿ ಕವಿತೆಯಲ್ಲಿ ಅಭಿವ್ಯಕ್ತಗೊಂಡಿದೆ. ಇಲ್ಲಿ ದಲಿತರ, ಜೀತದಾಳುಗಳ ಶೋಷಣೆಯ ವಿರುದ್ಧ ಹೋರಾಟವು ಆಂದೋಲನದ ಸ್ವರೂವನ್ನು ಪಡೆದು ಸಂಘಟಿತ ತರುಣರಿಂದ ಈ ವ್ಯವಸ್ಥೆಯು ನಾಶವಾಗಿ ಮೌಲ್ಯಯುತ ಸಮಾಜ ನಿರ್ಮಾಣವಾಗುವುದು. ಉಳಿಗಮಾನ್ಯ ವ್ಯವಸ್ಥೆ ನಿರ್ಮೂಲನಾ ಆಶಯವನ್ನು  ಕವಿತೆ ವ್ಯಕ್ತಪಡಿಸುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- ಹೊನ್ನಯ್ಯ ಸಿ.ಬಿ. (2008). *ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ,* ಜೈಭೀಮ್ ಪ್ರಕಾಶನ.
- *ಜಾಗತಿಕ ಇತಿಹಾಸ.* (2014). ನಿರ್ದೇಶನಾಲಯ, ಪದವಿಪರ್ವ ಶಿಕ್ಷಣ ಇಲಾಖೆ,
- ಮಹಾನಂದಾ ವಾಯ್. ಪಾಟೀಲ ಮತ್ತು ರಾಜಶ್ರೀ ಎನ್ ತೋಟಗಿ (ಸಂ.) (2022). *ಕನ್ನವೇ ನನ್ನ ಧರ್ಮ.* ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
- ಮುಗಳಿ ರಂ.ಶ್ರೀ. (2006). *ಕನ್ನಡ ಸಾಹಿತ್ಯ ಚರಿತ್ರೆ.* ಸಮಾಜ ಪುಸ್ತಕಾಲಯ.
- ರಾಜಪ್ಪ ದಳವಾಯಿ. (ಸಂ.). (2010). *ಕನ್ನಡ ಸಾಹಿತ್ಯ ಕೋಶ.* ದಳವಾಯಿ ಪ್ರಕಾಶನ